ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸಾಲ ಯೋಜನೆ

1072 (1221) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ನಿಗಮದಲ್ಲಿ ಸಾಲದ ಯೋಜನೆಯಡಿ ಸ್ವೀಕರಿಸಿದ ಅರ್ಜಿಗಳೆಷ್ಟು ಹಾಗೂ ಸಾಲ ಮಂಜೂರಾತಿ ಮಾಡಿದ ಪ್ರಕರಣಗಳೆಷ್ಟು (ಕಳೆದ ಒಂದು ವರ್ಷದ ಜಿಲ್ಲಾವಾರು ವಿವರಗಳನ್ನು ನೀಡುವುದು ;)

ಆ) ಈ ಸಾಲ ಯೋಜನೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಹಯೋಗದೊಂದಿಗೆ ಜಾರಿಗೊಳಿಸುತ್ತಿರುವುದರಿಂದ ಫಲಾನುಭವಿಗಳು ಸಾಲ ಸೌಲಭ್ಯವನ್ನು ಪಡೆಯುವಲ್ಲಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಸ್ವಾವಲಂಬನ ಸಾಲದ ಯೋಜನೆ ಅಡಿಯಲ್ಲಿ 13161 ಅರ್ಜಿಗಳು ಎಲ್ಲಾ ಜಿಲ್ಲೆಗಳಿಂದ ಬಂದಿದ್ದು ಇದರಲ್ಲಿ 1880 ಫಲಾನುಭವಿಗಳಿಗೆ ರೂ. 173.96ಮೊತ್ತವನ್ನು ಮಾರ್ಜಿನ ಹಣವನ್ನಾಗಿ ಹಾಗೂ ರೂ. 130.87 ಮೊತ್ತವನ್ನು ಸಹಾಯಧನವಾಗಿ ಬಿಡುಗಡೆ ಮಾಡಲಾಗಿದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು.

ಇ) ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆಯಲ್ಲಿ ಚರ್ಚೆಯಾಗಿದ್ದು, ಬ್ಯಾಂಕರ್ಸ್‌ರವರುಗಳು ನಿಗಮದಿಂದ ನಿಗದಿಪಡಿಸಿದ ಭೌತಿಕ ಗುರಿಯನ್ನು ಸಾಧಿಸಲಾಗುವುದು ಎಂದು ತಿಳಿಸಿರುತ್ತಾರೆ.

1998-99ನೇ ಸಾಲಿನಲ್ಲಿ ಸ್ವಾವಲಂಬನಾ ಯೋಜನೆಯಡಿ ಸ್ವೀಕೃತವಾದ ಅರ್ಜಿಗಳು ಮತ್ತು ಮಂಜೂರಾದ ವಿವರಗಳು.

ಕ್ರ.ಸಂ	ಜಿಲ್ಲೆಗಳು	ಸ್ವೀಕರಿಸಿದ ಅರ್ಜಿಗಳು	ಸಾಲ ಮಂಜೂರಾದುದು
1)	ಬೆಂಗಳೂರು ನಗರ	1827	350
2)	ಬೆಂಗಳೂರು (ಗ್ರಾ)	304	90
3)	ಬೆಳಗಾಂ	844	176
4)	ಚಾಮರಾಜನಗರ	55	14
5)	ಚಿಕ್ಕಮಗಳೂರು	190	56
6)	ಚಿತ್ರದುರ್ಗ	91	27
7)	ದಾವಣಗೆರೆ	82	24
8)	ಧಾರವಾಡ	441	93
9)	ಗುಲ್ಬರ್ಗಾ	3007	269
10)	ಗದಗ್	158	43
11)	ಮೈಸೂರು	379	137
12)	ಹಾವೇರಿ	113	20
13)	ಉತ್ತರ ಕನ್ನಡ	390	67
14)	ಮಂಡ್ಯ	184	56
15)	ತುಮಕೂರು	516	134
16)	ಕೋಲಾರ	488	125
17)	ಉಡುಪಿ	37	8
18)	ಕೊಪ್ಪಳ	321	67
19)	ಬಾಗಲಕೋಟೆ	30	9
20)	ಬಳ್ಳಾರಿ	511	155
21)	ಬೀದರ್	489	163
22)	ಬಿಜಾಪುರ	610	186
23)	ದಕ್ಷಿಣ ಕನ್ನಡ	601	182
24)	ಹಾಸನ	215	64
25)	ಕೊಡಗು	147	42
26)	ರಾಯಚೂರು	711	203
27)	ಶಿವಮೊಗ್ಗ	420	120
	ಒಟ್ಟು	13161	2880